ತಾಲೂಕು ಕಾನೂನು ಸೇವಾ ಸಮಿತಿ, ಹುನಗುಂದ
ವಕೀಲರ ಸಂಘ, ಹುನಗುಂದ
ವಿ.ಎಮ್.ಕೆ.ಎಸ್.ಆರ್. ವಸ್ತ್ರದ ಪದವಿ ಮಹಾವಿದ್ಯಾಲಯ,
ಹುನಗುಂದ ಇವರುಗಳ ಸಂಯುಕ್ತ ಆಶ್ರಯದಲ್ಲಿ

"ಸಂವಿಧಾನ ದಿನಾಚರಣೆ ಅಂಗವಾಗಿ"

**ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮದ**

## ಆಮಂತ್ರಣ ಪತ್ರಿಕೆ

ಸ್ಥಳ : ವಿ.ಎಮ್.ಕೆ.ಎಸ್.ಆರ್. ವಸ್ತ್ರದ ಪದವಿ ಮಹಾವಿದ್ಯಾಲಯ, ಹುನಗುಂದ

ದಿನಾಂಕ : 26-11-2022 ರಂದು ಶನಿವಾರ ಬೆಳಿಗ್ಗೆ 10-30 ಗಂಟೆಗೆ

ಉದ್ಘಾಟಕರು : ಸನ್ಮಾನ್ಯ ಶ್ರೀಮತಿ ದೀಪಾ ಅರಳಗುಂಡಿ
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ಹಾಗೂ ಸದಸ್ಯ ಕಾರ್ಯದರ್ಶಿಗಳು, ತಾಲೂಕು ಕಾನೂನು ಸೇವಾ ಸಮಿತಿ, ಹುನಗುಂದ

ಅಧ್ಯಕ್ಷತೆ : ಸನ್ಮಾನ್ಯ ಶ್ರೀಮತಿ ಎಸ್.ಕೆ. ಮಠ, ಪ್ರಾಚಾರ್ಯರು,
ವಿ.ಎಮ್.ಕೆ.ಎಸ್.ಆರ್. ವಸ್ತ್ರದ ಪದವಿ ಮಹಾ ವಿದ್ಯಾಲಯ, ಹುನಗುಂದ

ಮುಖ್ಯ ಅತಿಥಿಗಳು : ಸನ್ಮಾನ್ಯ ಶ್ರೀ ಬಾಲಚಂದ್ರ ಪೂಜಾರಿ
ಸಹಾಯಕ ಸರಕಾರಿ ಅಭಿಯೋಜಕರು ಮತ್ತು ಕಾರ್ಯನಿರ್ವಾಹಕ ಸದಸ್ಯ ಕಾರ್ಯದರ್ಶಿಗಳು, ತಾಲೂಕು ಕಾನೂನು ಸೇವಾ ಸಮಿತಿ, ಹುನಗುಂದ

: ಸನ್ಮಾನ್ಯ ಶ್ರೀ ಎಮ್.ಬಿ. ದೇಶಪಾಂಡೆ
ಅಧ್ಯಕ್ಷರು, ವಕೀಲರ ಸಂಘ, ಹುನಗುಂದ

: ಸನ್ಮಾನ್ಯ ಶ್ರೀ ಡಾ॥ ಪರಶುರಾಮ ಸಿ. ಹಾದಿಮನಿ
ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ

: ಸನ್ಮಾನ್ಯ ಶ್ರೀ ಪ್ರೊ॥ ಆರ್.ಎಸ್. ಕರ್ಕಸಗೇರಿ
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ

: ಸನ್ಮಾನ್ಯ ಶ್ರೀ ಡಾ॥ ಡಿ.ಎಸ್. ತಿಪ್ಪೇಸ್ವಾಮಿ
ಕಾರ್ಯಾಧ್ಯಕ್ಷರು, ಕಾಲೇಜು ಒಕ್ಕೂಟ

ಉಪನ್ಯಾಸಕರು : ಸನ್ಮಾನ್ಯ ಶ್ರೀ ಆರ್.ಕೆ. ನದಾಫ, ವಕೀಲರು

ವಿಷಯ : ಭಾರತದ ಸಂವಿಧಾನ

ಎಲ್ಲರಿಗೂ ಸ್ವಾಗತ

Coordinator
I Q A C
Vijaya Mahantesh Krupaposhit S.R.Vastrad
Arts,Science & Vijay Shankarappa ... Commerce College, Hungund-587118
Dist:Bagalkote State:Karnataka

Principal
Vijaya Mahantesh Krupaposhit
S R Vastrad Arts, Science & V S.Bellihal Commerce College,Hungund-587118

ವಿ.ಮ.ವಿ.ವ.ಸಂಘದ

ವಿಜಯ ಮಹಾಂತೇಶ ಕೃಪಾಪೋಷಿತ

## ಎಸ್. ಆರ್. ವಸ್ತ್ರದ ಕಲಾ, ವಿಜ್ಞಾನ ಮತ್ತು ವಿಜಯ ಶಂಕರಪ್ಪಾ ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ–587118

### "ಸಂವಿಧಾನ ದಿನಾಚರಣೆ ಅಂಗವಾಗಿ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ"

ಹುನಗುಂದ: ಸ್ಥಳೀಯ ವ್ಹಿ.ಎಂ.ಕೆ.ಎಸ್.ಆರ್ ವಸ್ತ್ರದ ಕಲಾ ವಿಜ್ಞಾನ ಹಾಗೂ ವ್ಹಿ.ಎಸ್.ಬೆಳ್ಳಿಹಾಳ ವಾಣಿಜ್ಯ ಪದವಿ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯ, ಹುನಗುಂದ. ರಾಜ್ಯಶಾಸ್ತ್ರ ವಿಭಾಗ, ಐ.ಕ್ಯೂ.ಎ.ಸಿ ಘಟಕ, ತಾಲೂಕಾ ಕಾನೂನು ಸೇವಾ ಸಮಿತಿ ಹುನಗುಂದ ಹಾಗೂ ವಕೀಲರ ಸಂಘ, ಹುನಗುಂದ ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ:26/11/2022 ರಂದು ಸಂವಿಧಾನ ದಿನಾಚರಣೆ ಅಂಗವಾಗಿ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ ಸನ್ಮಾನ್ಯ ಶ್ರೀಮತಿ ದೀಪಾ ಅರಳಗುಂಡಿ, ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಹಾಗೂ ಸದಸ್ಯ ಕಾರ್ಯದರ್ಶಿಗಳು ಕಾನೂನು ಸೇವಾ ಸಮಿತಿ, ಹುನಗುಂದ ಇವರು ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಹಾರ ಹಾಕುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಕೋರಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡ ಪ್ರಾಚಾರ್ಯರಾದ ಪ್ರೊ. (ಶ್ರೀಮತಿ) ಎಸ್.ಕೆ.ಮಠ ಅವರು ಸಂವಿಧಾನವು ವಿವಿಧತೆಯಲ್ಲಿ ಏಕತೆಯನ್ನು ಸಾಧಿಸುವುದು ನಮ್ಮ ಸಂವಿಧಾನದ ಮೂಲ ಆಶಯವಾಗಿದೆ. ಎಂದು ಹೇಳಿದರು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ ಶ್ರೀ.ಆರ್.ಕೆ. ನಧಾಫ್ ವಕೀಲರು . "ಸಂವಿಧಾನದ ಪ್ರಸ್ತುತತೆ ಹಾಗೂ ಅದರ ಹಿನ್ನೆಲೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರ ಪರಿಶ್ರಮ ಹಾಗೂ ಅದರ ಹಸ್ತಪ್ರತಿ ಲಿಪಿಕಾರರಾದ ಪ್ರೇಮಾ ಬೆಹಾರಿ, ನಾರಾಯಣ ರೈಜಾದ್ ಅವರ ತ್ಯಾಗ ಪರಿಶ್ರಮ ಕುರಿತು ಹೇಳಿದರು."

ಶ್ರೀ.ಎಂ.ಜಿ.ದೇಶಪಾಂಡೆ, ಅಧ್ಯಕ್ಷರು ವಕೀಲರ ಸಂಘ ಹುನಗುಂದ ಇವರು ಮಾತನಾಡುತ್ತಾ "ವಿದ್ಯಾರ್ಥಿಗಳು ಮೋಬೈಲ್ ಬಿಟ್ಟು ಓದಿನ ಕಡೆಗೆ ಗಮನ ಹರಿಸಬೇಕು ಹಾಗೂ ವಿವಿಧ ಕಾನೂನುಗಳ ಬಗ್ಗೆ ತಿಳಿದವರಾಗಿರಬೇಕು ಎಂಬ ತಿಳುವಳಿಕೆಯನ್ನು ಮೂಡಿಸಿದರು"

ಪ್ರೊ. ಎಸ್.ಎಸ್.ಮುಡಪುಲದಿನ್ನಿ ರವರು ವಿದ್ಯಾರ್ಥಿಗಳಿಗೆ ಸಂವಿಧಾನದ ಪೂರ್ವ ಪೀಠಿಕೆಯನ್ನು ಬೋಧಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಕುಮಾರ ಅಭಿಷೇಕ ಮುಡಪಲದಿನ್ನಿ ಇವರು ಪ್ರಾರ್ಥನೆಯನ್ನು ಹಾಡಿದರು. ಪ್ರೊ.ಹೆಚ್.ಎಸ್.ಬೋಳಿಶಟ್ಟರ ಸ್ವಾಗತಿಸಿದರು. ಪ್ರೊ.ಆರ್.ಎಸ್.ಕಕ್ಕಸಗೇರಿವರು ಪ್ರಾಸ್ತಾವಿಕ ನುಡಿ ಹೇಳಿದರು. ಪ್ರೊ.ಎಫ್.ಎಮ್.ರಾಮವಾಡಗಿ ವಂದಿಸಿದರೆ, ಡಾ. ಬಿ.ಎಂ ಒಂಟಿ ರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.[illegible] ಸಿ. ಹಾದಿಮನಿ. ಪ್ರೊ.ಬಿ.ಬಿ.ಕಡ್ಲಿ, ಪ್ರೊ.ಎಸ್.ಬಿ ಚಳಗೇರಿ ಪ್ರೊ.ಮಹೇಶ ಮಾದರ, ಉಪಸ್ಥಿತರಿದ್ದರು.

DRBGK/541/ 2010-11

ಹುನಗುಂದ

Coordinator
IQAC
Vijaya Mahantesh Krupapohit S.R.Vastrad Arts,Science & Vijay Sh[illegible]pa Bellihal Commerce College, H[illegible]d-587118
Dist:Bagalkote State:Karnataka

PRINCIPAL
Vijaya Mahantesh Kurpaposhit S.R.Vastrad Arts, Science And Vijay Shankarappa Bellihal Commerce College Hungund-587118 (Dist:Bagalkot-Karnataka

Principal
Vijaya Mahantesh Krupaposhit S.R.Vastrad Arts, Science & V.S.Bellihal Commerce College, Hungund-587118

Scanned with OKEN Scanner

LAW AWARENESS PROGRAMME 26-11-22
VIJAYAVANI - 3-12-2022,

# ವಿದ್ಯಾರ್ಥಿಗಳು ಅಭ್ಯಾಸಕ್ಕೆ ಆದ್ಯತೆ ನೀಡಲಿ

## ಶಶಿಕಲಾ ಮಠ ಸಲಹೆ | ಹುನಗುಂದದಲ್ಲಿ ಕಾನೂನು ಅರಿವು-ನೆರವು ಕಾರ್ಯಕ್ರಮ

■ ವಿಜಯವಾಣಿ ಸುದ್ದಿಜಾಲ ಹುನಗುಂದ

ಭಾರತವು ವಿವಿಧತೆಯಲ್ಲಿ ಏಕತೆ ಸಾಧಿಸುವುದು ನಮ್ಮ ಸಂವಿಧಾನದ ಮೂಲ ಆಶಯವಾಗಿದೆ ಎಂದು ಪ್ರಾಚಾರ್ಯೆ ಶಶಿಕಲಾ ಮಠ ಹೇಳಿದರು.

ಪಟ್ಟಣದ ವಿ.ಎಂ.ಕೆ.ಎಸ್.ಆರ್ ವಸ್ತ್ರದ ಕಲಾ ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ವಿಭಾಗ, ಐ.ಕ್ಯೂ.ಎ.ಸಿ ಘಟಕ, ತಾಲೂಕು ಕಾನೂನು ಸೇವಾ ಸಮಿತಿ, ಹುನಗುಂದ ತಾಲೂಕು ವಕೀಲರ ಸಂಘ ಸಹಯೋಗದಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ಕಾನೂನು ಅರಿವು- ನೆರವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಕೀಲರ ಸಂಘದ ಅಧ್ಯಕ್ಷ ಎಂ.ಜಿ.ದೇಶಪಾಂಡೆ ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್ ಗೀಳು ಬಿಟ್ಟು ಓದಿನ ಕಡೆಗೆ ಗಮನ ಹರಿಸಬೇಕು. ಸಂವಿಧಾನದ ವಿವಿಧ ಕಾನೂನುಗಳ ಬಗ್ಗೆ ತಿಳಿದವರಾಗಿರಬೇಕು ಎಂದರು. ಪ್ರಧಾನ ದಿವಾಣಿ ನ್ಯಾಯಾಧೀಶೆ ದೀಪಾ ಅರಳಗುಂಡಿ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಕಾರ್ಯಕ್ರಮ ಉದ್ಘಾಟಿಸಿದರು. ಅತಿಥಿ ಉಪನ್ಯಾಸಕ, ವಕೀಲ ಆರ್.ಕೆ.ನಧಾಫ್ ಅವರು ಸಂವಿಧಾನದ ಪ್ರಸ್ತುತತೆ ಹಾಗೂ ಅದರ ಹಿನ್ನೆಲೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿಶ್ರಮ ಹಾಗೂ ಅದರ ಹಸ್ತಪ್ರತಿ ಲಿಪಿಕಾರರಾದ ಪ್ರೇಮಾ ಬೆಹಾರಿ, ನಾರಾಯಣ ರೈಜಾದ್ ಅವರ ತ್ಯಾಗ ಪರಿಶ್ರಮ ಕುರಿತು ಹೇಳಿದರು. ಪ್ರೊ.ಎಸ್.ಎಸ್.ಮುಡಪುಲದಿನ್ನಿ ವಿದ್ಯಾರ್ಥಿಗಳಿಗೆ ಸಂವಿಧಾನದ ಪೂರ್ವ ಪೀಠಿಕೆ ಬೋಧಿಸಿದರು. ತಾಲೂಕು ಕಾನೂನು ಸೇವಾ ಸಮಿತಿ ಕಾರ್ಯದರ್ಶಿ ಬಾಲಚಂದ್ರ ಪೂಜಾರಿ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಪರಶುರಾಮ ಹಾದಿಮನಿ, ಪ್ರೊ.ಬಿ.ಬಿ.ಕಡ್ಲಿ, ಪ್ರೊ.ಎಸ್.ಬಿ.ಚಳಗೇರಿ, ಪ್ರೊ.ಮಹೇಶ ಮಾದರ ಇತರರಿದ್ದರು. ಅಭಿಷೇಕ ಮುಡಪಲದಿನ್ನಿ ಪ್ರಾರ್ಥಿಸಿದರು. ಪ್ರೊ.ಎಚ್.ಎಸ್ .ಬೋಳಿಶೆಟ್ಟರ ಸ್ವಾಗತಿಸಿದರು. ಪ್ರೊ.ಆರ್.ಎಸ್. ಕಕ್ಕಸಗೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರೊ.ಎಫ್.ಎಂ.ರಾಮವಾಡಗಿ ವಂದಿಸಿದರು. ಡಾ.ಬಿ.ಎಂ.ಒಂಟಿ ನಿರೂಪಿಸಿದರು.



ಹುನಗುಂದ ವಿ.ಎಂ.ಕೆ.ಎಸ್.ಆರ್ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು- ನೆರವು ಕಾರ್ಯಕ್ರಮದಲ್ಲಿ ದಿವಾಣಿ ನ್ಯಾಯಾಧೀಶೆ ದೀಪಾ ಅರಳಗುಂಡಿ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು. ಎಂ.ಬಿ.ದೇಶಪಾಂಡೆ, ಶಶಿಕಲಾ ಮಠ ಇತರರಿದ್ದರು.

V.M.S.R Vastred Arts Science and V.S Bellihal Commerce College HUNGUND

PRINCIPAL
Vijaya Mahantesh Kurpaposhit
S.R.Vastrad Arts, Science And Vijay
Shankarappa Bellihal Commerce College
Hungund-587118 (Dist:Bagalkot-Karnataka)

Coordinator
IQAC
Vijaya Mahantesh Krupapohit S.R.Vastrad
Arts,Science & Vijay Shankarappa Bellihal
Commerce College, Hungund-587118
Dist:Bagalkote State:Karnataka

Scanned with OKEN Scanner

V.M.K.S.R Vastrad Art, Science And V.S.Bellihal Commerce College ★ Hungund

ವಿ.ಮ.ವಿ.ವ.ಸಂಘದ
ವಿಜಯ ಮಹಾಂತೇಶ ಕೃಪಾಪೋಷಿತ
**ಎಸ್. ಆರ್. ವಸ್ತ್ರದ ಕಲಾ, ವಿಜ್ಞಾನ ಮತ್ತು ವಿಜಯ ಶಂಕರಪ್ಪಾ ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ-587118**

---

**ಪತ್ರಿಕಾ ಪ್ರಕಟಣೆ**

## "ಅಪರಾಧಿಗಳು ಕಾನೂನಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ"

*ಶ್ರೀಮತಿ. ಎಸ್.ಆರ್.ನಾಯಕ್*
*ಪಿ.ಎಸ್.ಐ ಹುನಗುಂದ*

**ಹುನಗುಂದ:** ಸ್ಥಳೀಯ ವ್ಹಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಮತ್ತು ವ್ಹಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯದಲ್ಲಿ, ದಿನಾಂಕ. 22-11-2022ರಂದು ಮಹಾವಿದ್ಯಾಲಯದ ಕಾಲೇಜು ಒಕ್ಕೂಟ, ಐಕ್ಯೂಎಸಿ ಮತ್ತು ಪೊಲೀಸ್ ಸ್ಟೇಷನ್ ಹುನಗುಂದ ಇವುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ **ಅಪರಾಧ ತಡೆ ಮಾಸಾಚರಣೆ-2022ರ** ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಮತಿ. ಎಸ್.ಆರ್. ನಾಯಕ್ ಪಿ.ಎಸ್.ಐ ಹುನಗುಂದ ಇವರು **"ಅಪರಾಧಿಗಳು ಕಾನೂನಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ"**. ಇತ್ತೀಚಿನ ದಿನಗಳಲ್ಲಿ "ಸೈಬರ್ ಕ್ರೈಮ್‌ಗೆ" ಪ್ರಜ್ಞಾವಂತರೇ ಯಾಮಾರುತ್ತಿದ್ದಾರೆ. ಇನ್ನೂ ಸಾಮಾನ್ಯರ ಪರಿಸ್ಥಿತಿ ಏನು? ಎಂದು ಕಳವಳ ವ್ಯಕ್ತಪಡಿಸಿದ ಅವರು "ತಿಳಿದೋ ಅಥವಾ ತಿಳಿಯದೋ ಅಪರಾಧ ಮಾಡಿದವರು ಕಠಿಣ ಶಿಕ್ಷೆ ಅನುಭವಿಸಬೇಕಾಗುತ್ತದೆ. ಅಪರಾಧಿಗಳಾಗಿ ಪಶ್ಚಾತಾಪ ಪಡುವುದಕ್ಕಿಂತ ಅಪರಾಧಿಗಳಾಗದಂತೆ ಜಾಗೃತಿವಹಿಸುವುದು ಒಳ್ಳೆಯದು" ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡ ಕಾಲೇಜಿನ ಪ್ರಾಚಾರ್ಯರಾದ ಪ್ರೊ.(ಶ್ರೀಮತಿ) ಎಸ್.ಕೆ. ಮಠ ಇವರು ವಿದ್ಯಾರ್ಥಿಗಳು ಅಪರಾದಕ್ಕೆ ಅವಕಾಶ ಮಾಡಿಕೊಡಬಾರದು, ಕಾನೂನುಗಳು ನಮ್ಮ ಹಿತಕ್ಕಾಗಿಯೇ ಇರುತ್ತವೆ. ಅವುಗಳನ್ನು ವಿದ್ಯಾರ್ಥಿಗಳು ಪರಿಪಾಲಿಸುವಂತೆ, ಕರೆ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀಯುತ ತಿಳಕಾಂತಿಮಠ ಎ.ಎಸ್.ಐ ಹುನಗುಂದ ಅವರು ಉಪಸ್ಥಿತರಿದ್ದರು.

ಲೆಫ್ಟಿನೆಂಟ್ ಎಸ್.ಬಿ. ಚಳಗೇರಿಯವರು ಪ್ರಾಸ್ತಾವಿಕ ಮಾತನಾಡಿ ಕಾರ್ಯಕ್ರಮದ ಉದ್ದೇಶವನ್ನು ಸ್ಪಷ್ಟಪಡಿಸಿದರು. ಒಕ್ಕೂಟದ ಅಧ್ಯಕ್ಷರಾದ ಶ್ರೀ. ಬಿ.ಎ ಕಂಠಿ ಅವರು ಸ್ವಾಗತಿಸಿದರು ಮತ್ತು ಡಾ. ತಿಪ್ಪೇಸ್ವಾಮಿ ಡಿ.ಎಸ್ ಅವರು ವಂದಿಸಿದರು.

ಕಾರ್ಯಕ್ರಮದಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

Coordinator
IQAC
Vijaya Mahantesh Kurpaposhit S.R.Vastrad
Arts,Science & Vijay Shankarappa Bellihal
Commerce College, Hungund-587118
Dist:Bagalkote State:Karnataka

ಪ್ರಾಚಾರ್ಯರು
PRINCIPAL
Vijaya Mahantesh Kurpaposhit
S.R.Vastrad Arts, Science And Vijay
Shankarappa Bellihal Commerce College
Hungund-587118 (Dist:Bagalkot-Karnataka)

Scanned with OKEN Scanner

ವಿ.ಮ.ವಿ.ವ.ಸಂಘದ

ವಿಜಯ ಮಹಾಂತೇಶಕೃಪಾಪೋಷಿತ

ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಮತ್ತು ವಿಜಯ ಶಂಕರಪ್ಪಾ ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ-587118

# ಕೋರ್ಟ ಕಲಾಪಗಳನ್ನು ವೀಕ್ಷಿಸಿದ ಮಹಾವಿದ್ಯಾಲಯದ ವಿದ್ಯಾರ್ಥಿಗಳು

ವ್ಹಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವ್ಹಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ ಹುನಗುಂದ ಐಕ್ಯೂಎಸಿ, ವಿಜ್ಞಾನ ವೇದಿಕೆ, ಮಹಿಳಾ ವೇದಿಕೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯಶಾಸ್ತ್ರ ವಿಭಾಗ ಇವುಗಳ ಸಹಯೋಗದಲ್ಲಿ ದಿನಾಂಕ 06-07-2023ರಂದು ವಿದ್ಯಾರ್ಥಿ/ನಿಯರಿಗೆ ಸ್ಥಳೀಯ ಕೋರ್ಟ ಕಲಾಪಗಳ ವೀಕ್ಷಣೆಗೆ ಅವಕಾಶ ದೊರಕಿಸಿ ಕೊಡಲಾಗಿತ್ತು.

ಮಹಾವಿದ್ಯಾಲಯದ ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಲ್ಲಿ ನ್ಯಾಯಾಧೀಶರ ಅನುಮತಿಯ ಮೇರೆಗೆ ಕೋರ್ಟನಲ್ಲಿ ನ್ಯಾಯಾಧೀಶರು, ವಕೀಲರು ಕಕ್ಷಿದಾರರು ನ್ಯಾಯ ತೀರ್ಮಾನದಲ್ಲಿ ಹೇಗೆ ಪಾಲ್ಗೊಳ್ಳುತ್ತಾರೆ ಎನ್ನುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 06-07-2023ರಂದು ಕೋರ್ಟ ಕಲಾಪ ವೀಕ್ಷಣೆಗೆ ಹಾಜರಿದ್ದರು.

ವಿದ್ಯಾರ್ಥಿಗಳಿಗೆ ಮತ್ತು ಪ್ರಾಧ್ಯಾಪಕರಿಗೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ನ್ಯಾಯಾಲಯದಲ್ಲಿ ನಡೆಯುವ ಪ್ರಕ್ರಿಯೆ ವೀಕ್ಷಣೆಗೆ ನ್ಯಾಯಾಲಯದಲ್ಲಿ ವೀಕ್ಷಣೆಗೆ ಅನುವುಮಾಡಿಕೊಡಲಾಯಿತು. ಇದರಿಂದ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಘನತೆ, ಗೌರವ ಮತ್ತು ವಕೀಲರು, ಕಕ್ಷಿದಾರರ ಪರವಾಗಿ ಮಾಡುವ ವಾದ ಮತ್ತು ಕೋರ್ಟ್ತೀರ್ಪು ಮುಂತಾದವುಗಳ ಬಗ್ಗೆ ವಿದ್ಯಾರ್ಥಿಗಳು ಮನವರಿಕೆ ಮಾಡಿಕೊಂಡರು.

ಈ ಸಂದರ್ಭದಲ್ಲಿ ಐಕ್ಯೂಎಸಿ ಸಂಚಾಲಕರಾದ ಡಾ.ಎಸ್, ಆರ್. ಗೊಲಗೊಂಡ, ಮಹಿಳಾ ವೇದಿಕೆ ಸಂಚಾಲಕರಾದ ಕು.ಕವಿತಾ ಹೂಲಗೇರಿ, ವಿಜ್ಞಾನ ವೇದಿಕೆ &ಭಾರತ್ ಸ್ಕೌಟ್ಸ್ ಮತ್ತುಗೈಡ್ಸ್ ಸಂಚಾಲಕರಾದ ಶ್ರೀಮತಿ.ಎಸ್.ಬಿ.ಅಮಲಿಕೊಪ್ಪ ಮತ್ತು ಎಲ್ಲ ವಿಜ್ಞಾನ ಉಪನ್ಯಾಸಕರು ಹಾಗೂ ರಾಜ್ಯಶಾಸ್ತ್ರ ಉಪನ್ಯಾಸಕರಾದ ಡಾ.ಪರಶುರಾಮ ಸಿ ಉಪಸ್ಥಿತರಿದ್ದರು. ಈ ಎಲ್ಲಾ ಚಟುವಟಿಕೆಗಳು ಮಾನ್ಯ ಪ್ರಾಚಾರ್ಯರರ ಮಾರ್ಗದರ್ಶನದಲ್ಲಿ ನೆರವೇರಿದವು.

ಪ್ರಾಚಾರ್ಯರು

Principal
Vijaya Mahantesh Krupaposhit
S.R.Vastrad Arts, Science & V.S.Bellihal
Commerce College,Hungund-587118

Coordinator
IQAC
Vijaya Mahantesh Krupapohit S.R.Vastrad
Arts,Science & V.Shankarappa Bellihal
Commerce College, Hungund-587118
Dist:Bagalkote State:Karnataka